2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 13/2021</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - ರಮೇಶ | | ಪಿಡಬ್ಲೂ -02 |
| ತಂದೆಯ ಹೆಸರು | - ಮೂಡ್ಲಪ್ಪ | | ಸಿಡಬ್ಲೂ -02 |
| ವಯಸ್ಸು | - 50 ವರ್ಷ | | |
| ಉದ್ಯೋಗ | - ವ್ಯವಸಾಯ | | |
| ವಾಸ ಸ್ಥಳ | - ದೊಡ್ಡಪೇಟೆ, ಕಡೂರು ತಾ. | | |

ದಿನಾಂಕಃ 25.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನ್ಯಾಯಾಲಯದ ಮುಂದಿರುವ ಆರೋಪಿ ಹಾಗೂ ಈ ಪ್ರಕರಣದ ದೂರುದಾರರು ಗೊತ್ತು, ನನ್ನ ಪಕ್ಕದ ಮನೆಯವರು. ಚಾಸಾ.3 ನಮ್ಮ ಎದುರು ಮನೆಯವರು.
2. ಈಗ ತೋರಿಸಿದ ನೋಟೀಸು ಹಾಗೂ ಸ್ಥಳ ಮಹಜರಿನಲ್ಲಿ ನನ್ನ ಸಹಿ ಇದ್ದು ಸಾಕ್ಷಿ ಗುರುತಿಸಿದ ನೋಟೀಸು ಮತ್ತು ಮಹಜರನ್ನು ನಿಪಿ.15 ಮತ್ತು ನಿಪಿ.16 ಎಂದು, ಸಾಕ್ಷಿಯ ಸಹಿಯನ್ನು ನಿಪಿ.15(ಎ) ಮತ್ತು ನಿಪಿ.16(ಎ) ಎಂದು ಗುರುತಿಸಲಾಯಿತು.
3. ನಿಪಿ.15 ಮತ್ತು 16 ಕ್ಕೆ ಕಳೆದ ಸುಮಾರು 3 ವರ್ಷಗಳ ಹಿಂದೆ ಚಾಸಾ.1 ಮಂಜುಳರವರ ಮನೆಯ ಹತ್ತಿರ ಕಡೂರು ಪೋಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ. ಪೋಲೀಸರು ಸ್ಥಳ ಮಹಜರು ಕ್ರಮ ಜರುಗಿಸಲು ಬಂದಿದ್ದರು. ಯಾವ ವಿಷಯದಲ್ಲಿ ಮಹಜರು ಮಾಡಿದರು ಎಂದು ಗೊತ್ತಿಲ್ಲ.

ನಿಪಿ.15 ಮತ್ತು 16 ರಲ್ಲಿ ಬರೆದ ವಿಚಾರ ಗೊತ್ತಿಲ್ಲ. ಚಾಸಾ.3 ರಮ ಕೂಡ ನನ್ನೊಂದಿಗೆ ಸದರಿ ದಾಖಲೆಗಳಿಗೆ ಸಹಿ ಮಾಡಿದ್ದಾರೆ. ಅದೇ ಸಮಯದಲ್ಲಿ ಚಾಸಾ.1 ರವರ ಮನೆಯ ಒಳಗೆ ಈಗ ಈಗ ನೋಡುತ್ತಿರುವ ನಿಪಿ.7 ಪೋಟೋವನ್ನು ತೆಗೆದಿರುತ್ತಾರೆ. ಯಾವ ಕಾರಣಕ್ಕೆ ಪೋಲೀಸರು ನಿಪಿ.7 ನ್ನು ಸಂಗ್ರಹಿಸಿದರು ಎಂದು ಗೊತ್ತಿಲ್ಲ. ನಾನು ಪೋಲೀಸರಲ್ಲಿ ಹೇಳಿಕೆ ನೀಡಿಲ್ಲ. ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

4. ದಿಃ 11.09.2020 ರಂದು ನಾನು ಚಾಸಾ.1 ರವರ ಮಗು ಕೊಲೆಯಾದ ವಿಚಾರದಲ್ಲಿ ಪೋಲೀಸರಲ್ಲಿ ಹೇಳಿಕೆ ನೀಡಿದ್ದೇನೆಂದರೆ ಸರಿಯಲ್ಲ. ನಾನು ತನಿಖಾಧಿಕಾರಿಗಳಲ್ಲಿ ಆರೋಪಿ ಕಡೂರು ನ್ಯಾಯಾಲಯದಲ್ಲಿ ವಕೀಲ ವೃತ್ತಿ ಮಾಡುತ್ತಿದ್ದು ಚಾಸಾ.1 ಅದೇ ನ್ಯಾಯಾಲಯದಲ್ಲಿ ಡಿ ದರ್ಜೆ ನೌಕರಳಾಗಿದ್ದಳು ಎಂದು ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಆರೋಪಿ ಹಾಗೂ ಚಾಸಾ.1 ಪ್ರೀತಿಸಿ ಎರಡನೇ ಮದುವೆ ಯಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಹಾಗೂ ಚಾಸಾ.1 ಪರಸ್ಪರ ಜಗಳವಾಡುತ್ತಿದ್ದರು ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಹಲವು ಬಾರಿ

ಆರೋಪಿ ಮತ್ತು ಚಾಸಾ.1 ರವರ ಮಧ್ಯೆ ರಾಜಿ ಪಂಚಾಯತಿ ನಡೆಸಿದ್ದೇನೆ ಎಂದರೆ ಸರಿಯಲ್ಲ.

5. ಚಾಸಾ.1 ರವರು ಲಕ್ಷ್ಮೀ ಆಸ್ಪತ್ರೆಯಲ್ಲಿ ಹೆಣ್ಣು ಮಗುವಿಗೆ ಜನ್ಮ ನೀಡಿದ್ದು ಮಗುವಿಗೆ ಲೋಲಾಕ್ಷಿ ಎಂದು ನಾಮಕರಣ ಮಾಡಿದ್ದು, ಸದರಿ ಮಗುವಿಗೆ ಎಂಟು ತಿಂಗಳು ಆಗಿದ್ದು, ಚಾಸಾ.1 ರವರು ಬಾಣಂತನ ಮುಗಿಸಿ ವಾಪಾಸ್ಸು ಬಂದಾಗ, ಆರೋಪಿ ಹೆಣ್ಣು ಮಗುವನ್ನು ಮನೆಗೆ ಕರೆದುಕೊಂಡು ಬರುವುದಾದಲ್ಲಿ ಮನೆಗೆ ಬರಬೇಡ ಎಂದು ಮನೆಯ ಬೀಗ ಕೊಡದೆ ಗಲಾಟೆ ಮಾಡಿದ್ದು, ಆ ಸಮಯದಲ್ಲಿ ನಾನು, ಚಾಸಾ.10, ಚಾಸಾ.11, ಚಾಸಾ.12 ರವರು ಸೇರಿ ಆರೋಪಿಗೆ ಬುದ್ದಿ ಹೇಳಿ ಮನೆಯ ಬೀಗವನ್ನು ಚಾಸಾ.1 ರವರಿಗೆ ಕೊಡಿಸಿದೆವು ಎಂದರೆ ಸರಿಯಲ್ಲ.

6. ಆರೋಪಿ ಚಾಸಾ.1 ರವರ ಮಗುವಿಗೆ ಸಿಟ್ಟಿನಿಂದ ಹೊಡೆಯುವುದನ್ನು ನಾನು ನೋಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ.1 ರವರು ನಮ್ಮ ಬಳಿ ಬಂದು ಆರೋಪಿ ಹೆಣ್ಣುಮಗುವೆಂದರೆ ಇಷ್ಟವಿಲ್ಲದೆ ಮಗುವಿಗೆ ಹೊಡೆಯುವುದು ಬಡಿಯುವುದು ಮಾಡುತ್ತ, ದರಿದ್ರವಳೇ ನೀನು ಹುಟ್ಟಿದ್ದೆ ಒಂದು ಗಂಡು ಮಗುವಾದರೂ ಹುಟ್ಟಬಾರದೇ, ಪೀಡೆ ಪಿಶಾಚಿ ಎಂದು ಬೈಯ್ಯುತ್ತಿದ್ದ ಎಂದು ಹೇಳಿಕೊಳ್ಳುತ್ತಿದ್ದಳು ಎಂದರೆ ಸರಿಯಲ್ಲ.

7. ದಿಃ 19.08.2020 ರಂದು ಸಂಜೆ 5.30 ಗಂಟೆ ಸಮಯದಲ್ಲಿ ಆರೋಪಿ ತನ್ನ ಮಗುವಿಗೆ ಹೊಡೆದ ವಿಚಾರದಲ್ಲಿ ಚಾಸಾ.1 ಗಲಾಟೆ ಮಾಡಿಕೊಂಡಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಚಾಸಾ.1 ರವರಿಗೆ ಕೈಯಿಂದ ಹಲ್ಲೆ ಮಾಡಿದ್ದರಿಂದ ಚಾಸಾ.1 ರವರ ಬಾಯಿಂದ ರಕ್ತ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಆಗ ನಾನು ಮತ್ತು ಚಾಸಾ.10 ರವರು ಸೇರಿ ಗಲಾಟೆ ಬಿಡಿಸಿ ಚಾಸಾ.1 ರವರನ್ನು ಚಾಸಾ.9 ರವರೊಂದಿಗೆ ಕಡೂರು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದೆವು ಎಂದರೆ ಸರಿಯಲ್ಲ.

8. ದಿಃ 10.09.2020 ಮದ್ಯಾಹ್ನ 12.45 ಗಂಟೆ ಸಮಯದಲ್ಲಿ ನಾನು ಜಮೀನಿನಿಂದ ವಾಪಾಸ್ಸು ಬಂದಾಗ ಆರೋಪಿತನು ಅವನ ಮನೆಗೆ ಬೀಗ ಹಾಕುತ್ತಿದ್ದನು ಎಂದರೆ ಸರಿಯಲ್ಲ. ಅಷ್ಟರಲ್ಲಿ ಚಾಸಾ.9 ರವರು ನಡೆದುಕೊಂಡು ಮನೆಯ ಸಮೀಪ ಬಂದು ಆರೋಪಿಗೆ ಮಗು ಎಲ್ಲಿ ಎಂದು ಕೇಳಿದಾಗ ಆರೋಪಿ ಮಗುವನ್ನು ಚಾಸಾ.1 ರವರು ಕೋರ್ಟಿಗೆ ಕರೆದುಕೊಂಡು ಹೋದಳು, ಚಾಸಾ.9 ರವರನ್ನು ಕೋರ್ಟಿಗೆ ಬಿಡುತ್ತೇನೆ ಎಂದು ಹೇಳಿ ಆತನ ಬೈಕಿನ ಹಿಂಬದಿ ಸೀಟಿನಲ್ಲಿ ಕುಳಿಸಿಕೊಂಡು ಹೋದನು ಎಂದರೆ ಸರಿಯಲ್ಲ. ಆ ದಿನ ಮದ್ಯಾಹ್ನ 1.00 ಗಂಟೆ ಸಮಯದಲ್ಲಿ ಚಾಸಾ.9 ರವರು ಜೋರಾಗಿ ಕಿರುಚಿಕೊಂಡ ಶಬ್ದ ಕೇಳಿ ನಾನು ಮತ್ತು ಚಾಸಾ.10 ರವರು ಹೋಗಿ ನೋಡಲಾಗಿ ಚಾಸಾ.1 ರವರ ಮನೆಯ ನಡುಮನೆಯಲ್ಲಿ ಅವರ ಮಗು ಲೋಲಾಕ್ಷಿ ಬಕೆಟಿನಲ್ಲಿ ತಲೆ ಕೆಳಗಾಗಿ ಮುಳುಗಿತ್ತು ಎಂದರೆ ನಾನು ನೋಡಿರುವುದಿಲ್ಲ.

9. ಕೂಡಲೇ ನಾವುಗಳು ಸೇರಿ ಮಗುವನ್ನು ಮೇಲಕ್ಕೆ ಎತ್ತಿ ಬೆನ್ನು ಹಾಗೂ ಎದೆ ಒತ್ತಿ ಉಪಚರಿಸಿದ್ದೆವು ಎಂದರೆ ಸರಿಯಲ್ಲ. ನಂತರ ಮನೆಯ ಸಮೀಪದ ಲಕ್ಷ್ಮಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಮಗುವನ್ನು ವೈದ್ಯರ ಬಳಿ ತೋರಿಸಿದಾಗ ಮಗುವನ್ನು ಪರೀಕ್ಷಿಸಿದ ವೈದ್ಯರು ಮಗು ಮೃತಪಟ್ಟಿದೆ ಎಂದು ತಿಳಿಸಿದರು ಎಂದರೆ ಸರಿಯಲ್ಲ.

10. ಆ ಸಮಯದಲ್ಲಿ ಚಾಸಾ.1 ರವರು ಆಸ್ಪತ್ರೆಗೆ ಬಂದಾಗ ಚಾಸಾ.9 ರವರು ಘಟನೆ ಬಗ್ಗೆ ಅವರಿಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತನು ತನಗೆ ಹೆಣ್ಣು ಮಗು ಹುಟ್ಟಿತ್ತು ಎಂಬ ಕಾರಣಕ್ಕೆ ತನ್ನ ಎಂಟು ತಿಂಗಳ ಮಗು ಲೋಲಾಕ್ಷಿಯನ್ನು ಬಕೆಟಿನಲ್ಲಿ ತಲೆ ಕೆಳಗಾಗಿ ಮುಳುಗಿಸಿ ಕೊಲೆಮಾಡಿರುತ್ತಾನೆ ಹಾಗೂ ಪೋಲೀಸರು ಮಹಜರಿಗೆ ಬಂದಾಗ ನಾನು ಸ್ಥಳ ಮಹಜರು ಕಾಲದಲ್ಲಿ ಹಾಜರಾಗಿ, ಮಹಜರಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೋಲೀಸರಿಗೆ ಈಗ ಓದಿ ಹೇಳಿದ ನಿಪಿ.17 ರನ್ವಯ ದಿಃ 11.09.2020 ರಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

11. ದಿಃ 12.09.2020 ರಂದು ಪೋಲೀಸರು ಸ್ಥಳಕ್ಕೆ ಬಂದಾಗ ಚಾಸಾ.9 ರವರು ಸ್ಥಳ ತೋರಿಸಿ ಈಗ ತೋರಿಸಿದ ಮು.ಮಾ.1 ಬಕೆಟ್ಟನ್ನು ಹಾಜರುಪಡಿಸಿದ್ದನ್ನು ಪೋಲೀಸರು ಅಮಾನತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಆ ಸಮಯದಲ್ಲಿ

ನಿಪಿ.7 ರಂತೆ ಛಾಯಚಿತ್ರವನ್ನು ಸಂಗ್ರಹಿಸಿದರು ಎಂದರೆ ನನಗೆ ಗೊತ್ತಿಲ್ಲ.

12. ಪ್ರಕರಣದ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಹಾಜರಿದ್ದು ತಮ್ಮದೇನು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ